# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ವಿಜ್ಞಾನಗಳ ಇತಿಹಾಸ ವಿಭಾಗ

## ಕ್ಯಾನ್ಸರ್ : ದೇಹ ಮತ್ತು ಮನಸ್ಸು ವಿಚಾರ ಸಂಕಿರಣ ಕಾರ್ಯಕ್ರಮ–21.7.2023

### ಉತ್ತಮ ಆಹಾರ ಮತ್ತು ಜೀವನ ಶೈಲಿಯಲ್ಲಿ ಬದಲಾವಣೆ

ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನಗಳ ಇತಿಹಾಸ ವಿಭಾಗವು ದಿನಾಂಕ 21.7.2023ರಂದು ಮಂಟಪ ಸಭಾಂಗಣದಲ್ಲಿ **ಕ್ಯಾನ್ಸರ್ : ದೇಹ ಮತ್ತು ಮನಸ್ಸು** ಎನ್ನುವ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ವಿಚಾರಸಂಕಿರಣವನ್ನು ಮಾನ್ಯ ಕುಲಪತಿಯವರಾದ **ಡಾ.ಡಿ.ವಿ. ಪರಮಶಿವಮೂರ್ತಿ ಅವರು** ಉದ್ಘಾಟಿಸಿದರು.



ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಅವರು ಕ್ಯಾನ್ಸರ್: ದೇಹ ಮತ್ತು ಮನಸ್ಸು ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಜೊತೆಯಲ್ಲಿ ವೇದಿಕೆಯಲ್ಲಿ (ಎಡಭಾಗದಿಂದ) ಡಾ. ಶೈಲಜ ಇಂ. ಹಿರೇಮಠ, ಡಾ. ಪ್ರಸನ್ನ ಸಂತೇಕಡೂರು, ಡಾ.ಕೆ.ಎಸ್. ಪವಿತ್ರಾ, ಡಾ.ಎ.ಸುಬ್ಬಣ್ಣ ರೈ ಹಾಗೂ ಡಾ. ವಸಂತ ಗಾಣಿಗೇರ ಅವರು

ಉದ್ಘಾಟನೆಯ ನಂತರ ಮೈಸೂರಿನ ಜೆ.ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ **ಡಾ.ಪ್ರಸನ್ನ ಸಂತೇಕಡೂರು** ಅವರು **ಕ್ಯಾನ್ಸರ್ : ದಾರಿ ತಪ್ಪಿದ ಜೀವಕೋಶ** ಕುರಿತು ಉಪನ್ಯಾಸ ನೀಡುತ್ತ ನಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಂಡರೆ ಅನುವಂಶಿಕತೆಯಿಂದ ಬರಬಹುದಾದ ಕ್ಯಾನ್ಸರ್‌ನಿಂದ ಪಾರಾಗಬಹುದು. ಜೀವನ ಶೈಲಿಯ ಬದಲಾವಣೆಯಿಂದ ಕ್ಯಾನ್ಸರ್ ಬಂದವರೂ ತಮ್ಮ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದು ಎಂದು ತಿಳಿಸುತ್ತ ಕ್ಯಾನ್ಸರ್‌ನ ಬೇರೆ ಬೇರೆ ಹಂತಗಳ ಪರಿಣಾಮಗಳನ್ನು, ಕ್ಯಾನ್ಸರ್‌ನ ವಿಧಗಳನ್ನು ವಿವರಿಸಿದರು.

**ಕ್ಯಾನ್ಸರ್ ಮತ್ತು ಮನಸ್ಸು** ಕುರಿತು ಉಪನ್ಯಾಸ ನೀಡಿದ ಶಿವಮೊಗ್ಗದ ಮನೋವೈದ್ಯರಾದ **ಡಾ.ಕೆ.ಎಸ್.ಪವಿತ್ರಾ ಅವರು** "ಅಯ್ಯೋ ಕ್ಯಾನ್ಸರ್ ಬಂತಾ ಎಂಬ ಉದ್ಗಾರದಿಂದ ಓ ಅಷ್ಟೇನಾ" ಎಂದು ಬದಲಾಗಿರುವ ಹೊತ್ತು ಇದು. ಇದು ಭೀತಿಯಾಗದೆ ಓ ಅಷ್ಟೇನಾ ಎಂದು ಉಳಿಯಬೇಕೆಂದರೆ ಕ್ಯಾನ್ಸರ್‌ನಲ್ಲಿ ನಡೆದಿರುವ ಸಂಶೋಧನೆಗಳು ಕನ್ನಡದಲ್ಲಿ ಬರಬೇಕು. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಯತ್ನ ಸ್ತುತ್ಯಾರ್ಹ ಎನಿಸಿದೆ. ವೈದ್ಯರಿಗೆ ಮಾತ್ರ ಅಲ್ಲ ಜವಾಬ್ದಾರಿಯುತ ಎಲ್ಲ ನಾಗರೀಕರಿಗೂ ಕ್ಯಾನ್ಸರ್ ಲೋಕದೊಂದಿಗೆ ಸಂಬಂಧ ಇದೆ. ಈಗ ಹುಟ್ಟಿದ ಮಗುವಿಗೆ ಕ್ಯಾನ್ಸರ್ ಬರುತ್ತಾ ಎಂಬ ತಂತ್ರಜ್ಞಾನ ಎಲ್ಲರಿಗೂ ಸಿಗುತ್ತಿದೆ. ಮೂಢನಂಬಿಕೆಯನ್ನು ತೊರೆಯದೆ ಇದ್ದರೆ ಮಾಡಿದ ಸಂಶೋಧನೆಗಳು ಜನರನ್ನು ತಲುಪುವುದಿಲ್ಲ, ವ್ಯರ್ಥವಾಗುತ್ತದೆ ಎಂದು ಕ್ಯಾನ್ಸರ್ ಲಸಿಕೆಯನ್ನು ಉದಾಹರಣೆಗೆ ನೀಡಿದರು. ಕ್ಯಾನ್ಸರ್ ಬಂದವರಿಗೆ ಔಷಧೋಪಚಾರದಿಂದ ವಾಸಿ ಮಾಡಬಹುದು. ಆದರೆ ನೆರೆಹೊರೆಯವರ ಅನುಕಂಪ ಕುತೂಹಲದ ದೃಷ್ಟಿ ಹೇಗೆ ಎದುರಿಸಬೇಕು ಅಂತ ಪ್ರಶ್ನೆ ಬಂದಾಗ ಕ್ಯಾನ್ಸರ್ ಬರದೇ ಇದ್ದವರೂ ಕ್ಯಾನ್ಸರ್ ಕುರಿತು ಈ ಕಾರಣಕ್ಕೆ ತಿಳಿವಳಿಕೆಯನ್ನು ಪಡೆಯಬೇಕು. ಸಂಶೋಧನೆಗಳು ಕ್ಯಾನ್ಸರ್‌ಗು ಮನಸ್ಸಿಗೂ ಇರುವ ಸಂಬಂಧವನ್ನು ದೃಢಪಡಿಸಿವೆ. ರೋಗಿಗೆ ಕ್ಯಾನ್ಸರ್ ಇದೆ ಎಂಬ ಮಾಹಿತಿ ಹೇಗೆ ನೀಡಬೇಕು. ಸಾಮಾಜಿಕ ಕಳಂಕ, ಸಾವಿನ ಹೆದರಿಕೆ, ಚಿಕಿತ್ಸೆಯ ಒತ್ತಡವನ್ನು ರೋಗಿ ಹೇಗೆ ಎದುರಿಸಬೇಕಾಗುತ್ತದೆ ಎಂಬುದನ್ನು ಮನೋವೈದ್ಯಕೀಯ ನೆಲೆಯಲ್ಲಿ ವಿವರಿಸಿದರು.

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ **ಡಾ.ವಸಂತ ಗಾಣಿಗೇರ** ಅವರು **ಕ್ಯಾನ್ಸರ್ ಮತ್ತು ಆಹಾರ** ಕುರಿತು ಉಪನ್ಯಾಸ ನೀಡುತ್ತ ಕ್ಯಾನ್ಸರ್ ಬಂದವರು ಮತ್ತು ಬರಲಾರದಂತೆ ತಡೆಯಲು ಬೌದ್ಧಿಕವಾಗಿ, ಭೌತಿಕವಾಗಿ ಎಷ್ಟೇ ಶ್ರೀಮಂತರಿದ್ದರೂ ಆಹಾರಕ್ರಮ ಬಹಳ ಮುಖ್ಯವಾಗಿದೆ. ಕಾರ್ಬೋಹೈಡ್ರೇಟ್ಸ್‌ನಷ್ಟೇ ಹಣ್ಣು ತರಕಾರಿಗಳ ಸೇವನೆ ಬಹಳ ಮುಖ್ಯ. ಇದರಿಂದ ದೇಹದಲ್ಲಿ ಪ್ರತಿಕಾಯಗಳು(ಆ್ಯಂಟಿಬಾಡಿಸ್) ಉತ್ಪತ್ತಿಯಾಗಲು ಸಾಧ್ಯವಾಗುತ್ತದೆ. ಇದರಿಂದ ವೈದ್ಯರನ್ನು ಭೇಟಿಯಾಗುವುದು ತಪ್ಪುತ್ತದೆ. ಉಪ್ಪು, ಸಕ್ಕರೆ, ಮೈದಾದಂತಹ ಬಿಳಿ ವಿಷಗಳನ್ನು ಬಿಡದಿದ್ದರೆ ಅಪಾಯಕ್ಕೆ ಆಹ್ವಾನ ಮಾಡಿದಂತೆ. ಜೀವಸತ್ವ, ನಾರಿನಾಂಶ ಇರುವ ಆಹಾರ ದೇಹಕ್ಕೆ ಬಹಳ ಅಗತ್ಯ. ಅನುವಂಶಿಕ ರೋಗಗಳನ್ನು ತಡೆಯಬೇಕೆಂದರೆ ಸಮತೋಲನ ಆಹರ ಸೇವನೆ ಬಹಳ ಅಗತ್ಯ. ತಂಬಾಕು, ಆಲ್ಕೋಹಾಲ್, ಸಿಗರೇಟ್ ಸೇವನೆಯಿಂದ ದೂರ ಇರಬೇಕೆಂದು ವಿದ್ಯಾರ್ಥಿ ಸಂಶೋಧಕರಲ್ಲಿ ಮನವಿ ಮಾಡಿಕೊಳ್ಳುತ್ತ ಮಧುಮೇಹ, ಹೃದ್ರೋಗ, ಕ್ಯಾನ್ಸರ್‌ಗಳು ಹೆಚ್ಚಾಗುತ್ತಿರುವುದಕ್ಕೆ ಕಲಬೆರಕೆ ಆಹಾರ ಕಾರಣವಾಗಿದೆ ಎಂದು ವಿಷಾದಿಸುತ್ತ ಯುವಕರು ಸಾವಯವ ಕೃಷಿ, ತೋಟಗಾರಿಕೆಗೆ ಮನಸ್ಸು ಮಾಡಬೇಕು. ಉತ್ತಮ ಆಹಾರ, ನೆಮ್ಮದಿಯ ಮನಸ್ಸು, ಉತ್ತಮ ಜೀವನಶೈಲಿಯಿಂದ ರೋಗಗಳನ್ನು ಬರದಂತೆ ತಡೆಯಬಹುದು ಎಂದು ತಿಳಿಸಿಕೊಟ್ಟರು.

ಉಪನ್ಯಾಸ ನೀಡಿದ ಮೂವರು ಗಣ್ಯರನ್ನು ಗೌರವಿಸಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾನ್ಯ ಕುಲಸಚಿವರಾದ **ಡಾ.ಎ.ಸುಬ್ಬಣ್ಣ ರೈ** ಅವರು ಇಂದಿನ ಮೂರು ಉಪನ್ಯಾಸಗಳು ನಮ್ಮ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಉಪಯುಕ್ತ ತಿಳಿವಳಿಕೆ ನೀಡಿವೆ ಎಂದರು.

ವಿಭಾಗದ ಮುಖ್ಯಸ್ಥರು ಹಾಗೂ ವಿಜ್ಞಾನಗಳ ಇತಿಹಾಸ ನಿಕಾಯದ ಡೀನರಾದ **ಡಾ.ಶೈಲಜ ಇಂ. ಹಿರೇಮಠ** ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಸಾರಾಂಗದ ಉಪನಿರ್ದೇಶಕರಾದ **ಶ್ರೀ ಹೆಚ್.ಬಿ.ರವೀಂದ್ರ** ನಿರೂಪಿಸಿದರು. ಸಂಗೀತ ಮತ್ತು ನೃತ್ಯ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು. ಡಾ.ಎ. ಮೋಹನ್ ವಂದಿಸಿದರು. ಕಾರ್ಯಕ್ರಮದಲ್ಲಿ **ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು** ಉಪಸ್ಥಿತರಿದ್ದರು.




ಕುಲಸಚಿವರಾದ ಡಾ.ಎ. ಸುಬ್ಬಣ್ಣ ರೈ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.



ಉದಯವಾಣಿ
ಭಾನುವಾರ, ಜುಲೈ 23, 2023

ಕನ್ನಡ ವಿವಿಯಲ್ಲಿ ವಿಚಾರ ಸಂಕಿರಣ | ನಿಯಮಿತ ಆಹಾರ ಕ್ರಮ ಅಗತ್ಯ

## ಜೀವನ ಶೈಲಿ ಬದಲಾವಣೆಯಿಂದ ಕ್ಯಾನ್ಸರ್ ನಿಯಂತ್ರಣ

**ಹೊಸಪೇಟೆ:** ಜೀವನ ಶೈಲಿ ಬದಲಾವಣೆಯಿಂದ ಆನುವಂಶಿಕತೆಯಿಂದ ಬರಬಹುದಾದ ಕ್ಯಾನ್ಸರ್‌ನಿಂದ ಪಾರಾಗಬಹುದು ಎಂದು ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಡಾ.ಪ್ರಸನ್ನ ಸಂತೇಕಡೂರು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಕ್ಯಾನ್ಸರ್:ದೇಹ ಮತ್ತು ಮನಸ್ಸು ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಜೀವನ ಪದ್ಧತಿ ಬದಲಾವಣೆಯಿಂದ ಕ್ಯಾನ್ಸರ್ ಪೀಡಿತರು ಕೂಡ ತಮ್ಮ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದರು.

ಶಿವಮೊಗ್ಗದ ಮನೋವೈದ್ಯ ಡಾ.ಕೆ.ಎಸ್.ಪವಿತ್ರಾ, ಕ್ಯಾನ್ಸರ್ ಮತ್ತು ಮನಸ್ಸು ಕುರಿತು ಮಾತನಾಡಿ, ಕ್ಯಾನ್ಸರ್ ಕುರಿತು ನಡೆದಿರುವ ಸಂಶೋಧನೆಗಳು ಕನ್ನಡದಲ್ಲಿ ಮುದ್ರಣವಾಗಬೇಕಿದೆ, ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಯತ್ನ ನಡೆಸಿರುವುದು ಸ್ವಾಗತಾರ್ಹ ಎಂದು ಹೇಳಿದರು. ವೈದ್ಯರು ಮಾತ್ರವಲ್ಲ, ನಾಗರಿಕರಿಗೂ ಕ್ಯಾನ್ಸರ್ ಲೋಕದೊಂದಿಗೆ ಸಂಬಂಧ ಇದೆ. ಸಂಶೋಧನೆಗಳು ಕ್ಯಾನ್ಸರ್‌ಗೂ ಮನಸ್ಸಿಗೂ ಇರುವ ಸಂಬಂಧವನ್ನು ದೃಢಪಡಿಸಿವೆ. ಕ್ಯಾನ್ಸರ್ ಪೀಡಿತರನ್ನು ಔಷಧೋಪಚಾರದಿಂದ ವಾಸಿ ಮಾಡಬಹುದು. ರೋಗಿಗೆ ಕ್ಯಾನ್ಸರ್ ಇದೆ ಎಂಬ ಮಾಹಿತಿ ಹೇಗೆ ನೀಡಬೇಕು, ಸಾಮಾಜಿಕ ಕಳಂಕ, ಸಾವಿನ ಹೆದರಿಕೆ, ಚಿಕಿತ್ಸೆಯ ಒತ್ತಡವನ್ನು ರೋಗಿ ಹೇಗೆ ಎದುರಿಸಬೇಕಾಗುತ್ತದೆ ಎಂಬುದನ್ನು ವಿವರಿಸಿದರು. ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ಡಾ।ವಸಂತ ಗಾಣಿಗೇರ ಅವರು ಕ್ಯಾನ್ಸರ್ ಮತ್ತು ಆಹಾರ ಕುರಿತು ಮಾತನಾಡಿ, ಕ್ಯಾನ್ಸರ್ ಬರದಂತೆ ತಡೆಯಲು ಬೌದ್ಧಿಕ, ಭೌತಿಕವಾಗಿ ಎಷ್ಟೇ ಶ್ರೀಮಂತರಿದ್ದರೂ ಆಹಾರಕ್ರಮ ಬಹಳ ಮುಖ್ಯವಾಗಿದೆ. ಕಾರ್ಬೋಹೈಡ್ರೇಟ್ಸ್ ನಷ್ಟೇ ಹಣ್ಣು ತರಕಾರಿಗಳ ಸೇವನೆ ಬಹಳ ಮುಖ್ಯ.

ಇದರಿಂದ ದೇಹದಲ್ಲಿ ಪ್ರತಿಕಾಯಗಳು (ಆ್ಯಂಟಿಬಾಡಿಸ್)ಉತ್ಪತ್ತಿಯಾಗಲು ಸಾಧ್ಯವಾಗುತ್ತದೆ ಎಂದರು. ಕುಲಪತಿ ಡಾ।ಡಿ.ವಿ. ಪರಮಶಿವಮೂರ್ತಿ, ವಿಚಾರ ಸಂಕಿರಣ ಉದ್ಘಾಟಿಸಿದರು. ಕುಲಸಚಿವ ಡಾ।ಎ.ಸುಬ್ಬಣ್ಣ ರೈ ಮಾತನಾಡಿದರು. ವಿಜ್ಞಾನಗಳ ಇತಿಹಾಸ ನಿಕಾಯದ ಡೀನ್ ಡಾ।ಶೈಲಜ ಇಂ. ಹಿರೇಮಠ ಪ್ರಾಸ್ತಾವಿಕವಾಗಿಮಾತನಾಡಿದರು. ಪ್ರಸಾರಾಂಗದ ಉಪನಿರ್ದೇಶಕ ಎಚ್.ಬಿ. ರವೀಂದ್ರ ನಿರೂಪಿಸಿದರು. ಡಾ।ಎ. ಮೋಹನ್ ವಂದಿಸಿದರು. ವಿವಿಧ ನಿಕಾಯಗಳ ಡೀನ್‌ರು, ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.

**ಹೊಸಪೇಟೆ: ಕುಲಪತಿ ಡಾ।ಡಿ.ವಿ. ಪರಮಶಿವಮೂರ್ತಿ ವಿಚಾರ ಸಂಕಿರಣ ಉದ್ಘಾಟಿಸಿದರು.**

ಕನ್ನಡಪ್ರಭ
ಸೋಮವಾರ 24.7.2023



ಹಂಪಿಯ ಕನ್ನಡ ವಿವಿಯಲ್ಲಿ ನಡೆದ ವಿಚಾರಸಂಕಿರಣವನ್ನು ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಉದ್ಘಾಟಿಸಿದರು. ಶಿವಮೊಗ್ಗದ ಮನೋವೈದ್ಯ ಡಾ. ಕೆ.ಎಸ್. ಪವಿತ್ರಾ, ಪ್ರಾಧ್ಯಾಪಕ ಡಾ. ವಸಂತ ಗಾಣಿಗೇರ ಇತರರು ಇದ್ದರು.

# ಕ್ಯಾನ್ಸರ್‌ನಿಂದ ಪಾರಾಗಲು ಉತ್ತಮ ಜೀವನಶೈಲಿ ಮುಖ್ಯ

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ಜೀವನಶೈಲಿ ಬದಲಾವಣೆಯಿಂದ ಅನುವಂಶಿಕತೆಯಿಂದ ಬರಬಹುದಾದ ಕ್ಯಾನ್ಸರ್‌ನಿಂದ ಪಾರಾಗಬಹುದು ಎಂದು ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಡಾ. ಪ್ರಸನ್ನ ಸಂತೇಕಡೂರು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಚಾರಸಂಕಿರಣದಲ್ಲಿ ಕ್ಯಾನ್ಸರ್: ದೇಹ ಮತ್ತು ಮನಸ್ಸು ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಜೀವನ ಪದ್ಧತಿ ಬದಲಾವಣೆಯಿಂದ ಕ್ಯಾನ್ಸರ್ ಪೀಡಿತರು ಕೂಡ ತಮ್ಮ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದು ಎಂದರು.

ಶಿವಮೊಗ್ಗದ ಮನೋವೈದ್ಯ ಡಾ. ಕೆ.ಎಸ್. ಪವಿತ್ರಾ, ಕ್ಯಾನ್ಸರ್ ಮತ್ತು ಮನಸ್ಸು ಕುರಿತು ಮಾತನಾಡಿ, ಕ್ಯಾನ್ಸರ್ ಕುರಿತು ನಡೆದಿರುವ ಸಂಶೋಧನೆಗಳು ಕನ್ನಡದಲ್ಲಿ ಮುದ್ರಣವಾಗಬೇಕಿದೆ. ಈನಿಟ್ಟಿನಲ್ಲಿಕನ್ನಡ ವಿಶ್ವವಿದ್ಯಾಲಯದ ಪ್ರಯತ್ನ ನಡೆಸಿರುವುದು ಸ್ವಾಗತಾರ್ಹವಾಗಿದೆ ಎಂದರು.

ಪ್ರಾಧ್ಯಾಪಕ ಡಾ. ವಸಂತ ಗಾಣಿಗೇರ ಅವರು ಕ್ಯಾನ್ಸರ್ ಮತ್ತು ಆಹಾರ ಕುರಿತು ಮಾತನಾಡಿದರು.

ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ, ವಿಚಾರಸಂಕಿರಣ ಉದ್ಘಾಟಿಸಿದರು. ಕುಲಸಚಿವ ಡಾ. ಎ. ಸುಬ್ಬಣ್ಣ ರೈ ಮಾತನಾಡಿದರು. ವಿಜ್ಞಾನಗಳ ಇತಿಹಾಸ ನಿಕಾಯದ ಡೀನ್ ಡಾ. ಶೈಲಜ ಇಂ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಸಾರಾಂಗದ ಉಪನಿರ್ದೇಶಕ ಎಚ್.ಬಿ. ರವೀಂದ್ರ ನಿರೂಪಿಸಿದರು. ಡಾ. ಎ. ಮೋಹನ್ ವಂದಿಸಿದರು.

ವಿಜಯ ಕರ್ನಾಟಕ
ಭಾನುವಾರ,23 ಜುಲೈ 2023,
ಗಂಗಾವತಿ

# 'ಜೀವನಶೈಲಿ ಬದಲಾಯಿಸಿಕೊಳ್ಳಿ'

■ **ವಿಕ ಸುದ್ದಿಲೋಕ** ವಿಜಯನಗರ (ಹೊಸಪೇಟೆ)

**ಕನ್ನಡ ವಿವಿಯಲ್ಲಿ 'ಕ್ಯಾನ್ಸರ್ : ದೇಹ ಮತ್ತು ಮನಸ್ಸು' ವಿಚಾರ ಸಂಕಿರಣ**

ಹಂಪಿ ಕನ್ನಡ ವಿವಿಯ ವಿಜ್ಞಾನಗಳ ಇತಿಹಾಸ ವಿಭಾಗದಿಂದ ವಿವಿಯ ಮಂಟಪ ಸಭಾಂಗಣದಲ್ಲಿ ಶುಕ್ರವಾರ 'ಕ್ಯಾನ್ಸರ್ : ದೇಹ ಮತ್ತು ಮನಸ್ಸು' ವಿಚಾರ ಸಂಕಿರಣವನ್ನು ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಉದ್ಘಾಟಿಸಿದರು.

ಮೈಸೂರಿನ ಜೆ.ಎಸ್.ಎಸ್. ವೈದ್ಯಕೀಯ ಕಾಲೇಜಿನ ಡಾ.ಪ್ರಸನ್ನ ಸಂತೇಕಡೂರು ಉಪನ್ಯಾಸ ನೀಡಿ, ನಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಂಡರೆ ಅನುವಂಶಿಕತೆಯಿಂದ ಬರಬಹುದಾದ ಕ್ಯಾನ್ಸರ್‌ನಿಂದ ಪಾರಾಗಬಹುದು. ಜೀವನ ಶೈಲಿಯ ಬದಲಾವಣೆಯಿಂದ ಕ್ಯಾನ್ಸರ್ ಬಂದವರೂ ತಮ್ಮ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದು ಎಂದರು.

ಶಿವಮೊಗ್ಗದ ಮನೋವೈದ್ಯ ಡಾ.ಕೆ.ಎಸ್.ಪವಿತ್ರಾ ಮಾತನಾಡಿ, ಅಯ್ಯೋ ಕ್ಯಾನ್ಸರ್ ಬಂತಾ ಎಂಬ ಉದ್ಗಾರದಿಂದ ಓ ಅಷ್ಟೇನಾ ಎಂದು ಬದಲಾಗಿರುವ ಹೊತ್ತು ಇದು. ಇದು ಭೀತಿಯಾಗದೆ ಓ ಅಷ್ಟೇನಾ ಎಂದು ಉಳಿಯಬೇಕೆಂದರೆ ಕ್ಯಾನ್ಸರ್‌ನಲ್ಲಿ ನಡೆದಿರುವ ಸಂಶೋಧನೆಗಳು ಕನ್ನಡದಲ್ಲಿ ಬರಬೇಕು. ಈ ನಿಟ್ಟಿನಲ್ಲಿ ಕನ್ನಡ ವಿವಿಯ ಪ್ರಯತ್ನ ಸ್ತುತ್ಯಾರ್ಹ ಎನಿಸಿದೆ. ವೈದ್ಯರಿಗೆ ಮಾತ್ರ ಅಲ್ಲ ಜವಾಬ್ದಾರಿಯುತ ಎಲ್ಲ ನಾಗರಿಕರಿಗೂ ಕ್ಯಾನ್ಸರ್ ಲೋಕದೊಂದಿಗೆ ಸಂಬಂಧ ಇದೆ. ಈಗ ಹುಟ್ಟಿದ ಮಗುವಿಗೆ ಕ್ಯಾನ್ಸರ್ ಬರುತ್ತಾ ಎಂಬ ತಂತ್ರಜ್ಞಾನ ಎಲ್ಲರಿಗೂ ಸಿಗುತ್ತಿದೆ. ಮೂಢನಂಬಿಕೆಯನ್ನು ತೊರೆಯದೇ ಇದ್ದರೆ ಮಾಡಿದ ಸಂಶೋಧನೆಗಳು ಜನರನ್ನು ತಲುಪುವುದಿಲ್ಲ, ವ್ಯರ್ಥವಾಗುತ್ತದೆ ಎಂದು ಕ್ಯಾನ್ಸರ್ ಲಸಿಕೆಯನ್ನು ಉದಾಹರಣೆಗೆ ನೀಡಿದರು.

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿವಿಯ ಪ್ರಾಧ್ಯಾಪಕ ಡಾ. ವಸಂತ ಗಾಣಿಗೇರ ಅವರು ಕ್ಯಾನ್ಸರ್ ಮತ್ತು ಆಹಾರ ಕುರಿತು ಉಪನ್ಯಾಸ ನೀಡಿದರು. ವಿವಿಯ ಕುಲಸಚಿವ ಡಾ.ಎ.ಸುಬ್ಬಣ್ಣರೈ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಮುಖ್ಯಸ್ಥೆ ಡಾ.ಶೈಲಜಾ ಹಿರೇಮಠ ಪ್ರಾಸ್ತಾವಿಕ ಮಾತನಾಡಿದರು.

ಪ್ರಸಾರಾಂಗದ ಉಪನಿರ್ದೇಶಕ ಎಚ್.ಬಿ.ರವೀಂದ್ರ, ಡಾ.ಎ.ಮೋಹನ್ ಇತರರಿದ್ದರು.

ಮಂಗಳವಾರ, 25, ಜುಲೈ, 2023
ಹುಬ್ಬಳ್ಳಿ | HUBBALLI
ಸಂಯುಕ್ತ ಕರ್ನಾಟಕ

# ಶಿಸ್ತಿನ ಬದುಕಿನಿಂದ ಕ್ಯಾನ್ಸರ್ ದೂರ

**ಹೊಸಪೇಟೆ:** ಜೀವನ ಶೈಲಿ ಬದಲಾವಣೆಯಿಂದ ಅನುವಂಶಿಕತೆಯ ಕ್ಯಾನ್ಸರ್‌ನಿಂದ ಪಾರಾಗಬಹುದು ಎಂದು ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಡಾ.ಪ್ರಸನ್ನ ಸಂತೇಕಡೂರು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಕ್ಯಾನ್ಸರ್: ದೇಹ ಮತ್ತು ಮನಸ್ಸು ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಜೀವನ ಪದ್ಧತಿ ಬದಲಾವಣೆಯಿಂದ ಕ್ಯಾನ್ಸರ್ ಪೀಡಿತರು ಕೂಡ ತಮ್ಮ ಆಯುಸ್ಸು ಹೆಚ್ಚಿಸಿಕೊಳ್ಳಬಹುದು ಎಂದರು.

ಶಿವಮೊಗ್ಗದ ಮನೋವೈದ್ಯ ಡಾ.ಕೆ.ಎಸ್.ಪವಿತ್ರಾ, ಕ್ಯಾನ್ಸರ್ ಮತ್ತು ಮನಸ್ಸು ಕುರಿತು ಮಾತನಾಡಿ, ಕ್ಯಾನ್ಸರ್ ಕುರಿತು ನಡೆದಿರುವ ಸಂಶೋಧನೆಗಳು ಕನ್ನಡದಲ್ಲಿ ಮುದ್ರಣವಾಗಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಯತ್ನ ನಡೆಸಿರುವುದು ಸ್ವಾಗತಾರ್ಹ ಎಂದರು.

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ವಸಂತ ಗಾಣಿಗೇರ ಅವರು ಕ್ಯಾನ್ಸರ್ ಮತ್ತು ಆಹಾರ ಕುರಿತು ಮಾತನಾಡಿ, ಕ್ಯಾನ್ಸರ್ ಬರದಂತೆ ತಡೆಯಲು ಬೌದ್ಧಿಕ, ಭೌತಿಕವಾಗಿ ಎಷ್ಟೇ ಶ್ರೀಮಂತರಿದ್ದರೂ ಆಹಾರಕ್ರಮ ಬಹಳ ಮುಖ್ಯವಾಗಿದೆ. ಕಾರ್ಬೋಹೈಡ್ರೇಟ್ಸ್‌ನಷ್ಟೇ ಹಣ್ಣು ತರಕಾರಿಗಳ ಸೇವನೆ ಬಹಳ ಮುಖ್ಯ. ಇದರಿಂದ ದೇಹದಲ್ಲಿ ಪ್ರತಿಕಾಯಗಳು (ಆ್ಯಂಟಿ ಬಾಡಿಸ್) ಉತ್ಪತ್ತಿಯಾಗಲು ಸಾಧ್ಯವಾಗುತ್ತದೆ ಎಂದರು.ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ, ವಿಚಾರ ಸಂಕಿರಣ ಉದ್ಘಾಟಿಸಿದರು. ಕುಲಸಚಿವ ಡಾ.ಎ.ಸುಬ್ಬಣ್ಣರೈ ಮಾತನಾಡಿದರು.

ವಿಜ್ಞಾನಗಳ ಇತಿಹಾಸ ನಿಕಾಯದ ಡೀನ್ ಡಾ.ಶೈಲಜ ಇಂ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಸಾರಾಂಗದ ಉಪನಿರ್ದೇಶಕ ಹೆಚ್.ಬಿ.ರವೀಂದ್ರ ನಿರೂಪಿಸಿದರು. ಡಾ.ಎ. ಮೋಹನ್ ವಂದಿಸಿದರು. ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.



ಹೊಸಪೇಟೆಯಲ್ಲಿ ವಿಚಾರ ಸಂಕಿರಣವನ್ನು ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಉದ್ಘಾಟಿಸಿದರು.

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

## ವಿಜ್ಞಾನಗಳ ಇತಿಹಾಸ ವಿಭಾಗ

•

ವಿಚಾರ ಸಂಕೀರಣ

## ಕ್ಯಾನ್ಸರ್ : ದೇಹ ಮತ್ತು ಮನಸ್ಸು

•

ಅಧ್ಯಕ್ಷತೆ

**ಡಾ.ಡಿ.ವಿ. ಪರಮಶಿವಮೂರ್ತಿ**

ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

•

ಕ್ಯಾನ್ಸರ್ : ದಾರಿ ತಪ್ಪಿದ ಜೀವಕೋಶ

**ಡಾ. ಪ್ರಸನ್ನ ಸಂತೇಕಡೂರು**

ಜೆ.ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು

•

ಕ್ಯಾನ್ಸರ್ ಮತ್ತು ಮನಸ್ಸು

**ಡಾ. ಕೆ.ಎಸ್. ಪವಿತ್ರಾ**

ಮನೋವೈದ್ಯರು, ಶಿವಮೊಗ್ಗ

•

ಕ್ಯಾನ್ಸರ್ ಮತ್ತು ಆಹಾರ

**ಡಾ. ವಸಂತ ಗಾಣಿಗೇರ**

ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾಲಯ, ಬಾಗಲಕೋಟೆ

ಪ್ರಾಸ್ತಾವಿಕ

**ಡಾ.ಶೈಲಜ ಇಂ. ಹಿರೇಮಠ**

ಮುಖ್ಯಸ್ಥರು, ವಿಜ್ಞಾನಗಳ ಇತಿಹಾಸ ವಿಭಾಗ

•

ಸ್ಥಳ: ಮಂಟಪ ಸಭಾಂಗಣ

**೨೧ ಜುಲೈ ೨೦೨೩ ಶುಕ್ರವಾರ, ಬೆಳಿಗ್ಗೆ ೧೧.೦೦ ಗಂಟೆಗೆ**

## ತಮಗೆ ಸ್ವಾಗತ

**ಡಾ.ಶೈಲಜ ಇಂ. ಹಿರೇಮಠ**
ಮುಖ್ಯಸ್ಥರು,
ವಿಜ್ಞಾನಗಳ ಇತಿಹಾಸ ವಿಭಾಗ

**ಡಾ.ಎ.ಸುಬ್ಬಣ್ಣ ರೈ**
ಕುಲಸಚಿವರು